**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾಯವರ ನ್ಯಾಯಾಲಯ, ಹುಣಸೂರು.**

**ಸಿ.ಸಿ. 100/2024**

ಫಿರ್ಯಾದುದಾರರುಃ ಸರ್ಕಾರದ ಪರ ಹುಣಸೂರು ಪಟ್ಟಣ ಪೊಲೀಸ್ ಠಾಣೆ,
ಹುಣಸೂರು, ಮೈಸೂರು ಜಿಲ್ಲೆ.

ವಿರುದ್ಧ

ಆರೋಪಿತರುಃ

1. ಭರತ್ ಆರ್ ಬಿನ್ ಲೇಟ್ ರಾಜು ಕೆ,
40 ವರ್ಷ,
ವಾಸಃ ಎಲ್ ಐ ಜಿ 55,
ಕೆ ಹೆಚ್ ಬಿ ಕಾಲೋನಿ, ಕಲ್ಕುಣಿಕೆ,
ಹುಣಸೂರು ಟೌನ್, ಮೈಸೂರು ಜಿಲ್ಲೆ.

2. ವಿಜಯಶ್ರೀ ರಾವತ್ ಕೋಂ ಭರತ್ ಆರ್,
20 ವರ್ಷ,
ವಾಸಃ ಎಲ್ ಐ ಜಿ 55,
ಕೆ ಹೆಚ್ ಬಿ ಕಾಲೋನಿ, ಕಲ್ಕುಣಿಕೆ,
ಹುಣಸೂರು ಟೌನ್, ಮೈಸೂರು ಜಿಲ್ಲೆ.

## ದೋಷಾರೋಪಣೆ

**ಶ್ರೀಮತಿ ಜೈಬುನ್ನಿಸಾ, ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಹುಣಸೂರು ಆದ ನಾನು ಆರೋಪಿತರಾದ ನಿಮ್ಮ ಮೇಲೆ ಮಾಡುವ ದೋಷಾರೋಪಣೆ ಏನೆಂದರೆಃ**

ದಿನಾಂಕ 12.12.2023 ರಂದು ಬೆಳಿಗ್ಗೆ 6.30 ಗಂಟೆಯ ಸಮಯದಲ್ಲಿ ಹುಣಸೂರು ಪಟ್ಟಣ ಪೊಲೀಸ್ ಠಾಣಾ ಸರಹದ್ದು, ಹುಣಸೂರು ಪಟ್ಟಣ ಕಲ್ಕುಣಿಕೆಯ ಕೆ ಹೆಚ್ ಬಿ ಕಾಲೋನಿ, ಎಲ್ ಐ ಜಿ 55ರ ವಾಸದ ಮನೆಯಲ್ಲಿ ಸಾಕ್ಷಿ-1ರವರು ಪಾತ್ರೆಯನ್ನು ತೊಳೆಯುತ್ತಿರುವಾಗ 1ನೇ ಆರೋಪಿಯಾದ ನೀವು ನೀರು ಹಿಡಿದುಕೊಳ್ಳಲು ಬಂದಾಗ ಸಾಕ್ಷಿ-1ರವರು 1ನೇ ಆರೋಪಿಯಾದ ನಿಮಗೆ ನನಗೆ ಕೆಲಸಕ್ಕೆ ತಡವಾಗುತ್ತದೆ 2 ನಿಮಿಷ ಕಾಯಿರಿ ಎಂದು ಹೇಳಿದ್ದಕ್ಕೆ

1ನೇ ಆರೋಪಿಯಾದ ನೀವು ಸಾಕ್ಷಿ-1ರವರಿಗೆ ಮುಂಡೆ ನಾನು ನಿನ್ನ ಕಾಯಬೇಕಾ ನಿಮ್ಮಮ್ಮನ ಕೈಯ್ಯು ಎಂದು ಬಾಯಿಗೆ ಬಂದಂತೆ ಅವಾಚ್ಯ ಶಬ್ದದಿಂದ ಬೈದಿರುತ್ತೀರಿ, ಇದು ಭಾರತೀಯ ದಂಡ ಸಂಹಿತೆ ಕಲಂ 504 ಸಹಕಲಂ 34ರಡಿ ದಂಡನೀಯ ಅಪರಾಧವಾಗಿದ್ದು, ಈ ನ್ಯಾಯಾಲಯದ ಸಂಜ್ಞೆಯೊಳಗೆ ಎಸಗಿರುತ್ತೀರಿ.

ಮೇಲ್ಕಂಡ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ, 1ನೇ ಆರೋಪಿಯಾದ ನೀವು ಸಾಕ್ಷಿ 1 ರವರಿಗೆ ಬಾಯಿಗೆ ಬಂದಂತೆ ಬೈಯ್ಯುತ್ತಾ ನಿನ್ನ ಮುಗಿಸುತ್ತೇನೆ ಮುಂಡೆ ಮನೆಯಲ್ಲಿ ನಿನ್ನ ಆಟ ಜಾಸ್ತಿಯಾಯಿತು ಎಂದು ಬೈಯ್ಯುತ್ತಾ ಕೈಯಿಂದ ಸಾಕ್ಷಿ-1ರವರ ಕುತ್ತಿಗೆಯನ್ನು ಹಿಡಿದುಕೊಂಡು ನಿನ್ನ ಸಾಯಿಸುತ್ತೇನೆ ಎಂದು ಕೈಯಿಂದ ಕತ್ತಿನಲ್ಲಿದ್ದ ಕರಿಮಣಿ ಮಾಂಗಲ್ಯವನ್ನು ಕಿತ್ತುಹಾಕಿ ಕಾಲಿನಿಂದ ಸಾಕ್ಷಿ-1ರವರ ಬಲಭಾಗದ ಸೊಂಟಕ್ಕೆ ಒದ್ದು ನೋವುಂಟು ಮಾಡಿರುತ್ತೀರಿ, ಇದು ಭಾರತೀಯ ದಂಡ ಸಂಹಿತೆ ಕಲಂ 323 ಸಹಕಲಂ 34 ರಡಿ ದಂಡನೀಯ ಅಪರಾಧವಾಗಿದ್ದು, ಈ ನ್ಯಾಯಾಲಯದ ಸಂಜ್ಞೆಯೊಳಗೆ ಎಸಗಿರುತ್ತೀರಿ.

ಮೇಲ್ಕಂಡ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ, 1ನೇ ಆರೋಪಿಯಾದ ನೀವು ಸಾಕ್ಷಿ 1 ರವರ ಹಿಂದಲೆಯನ್ನು ಹಾಗೂ ಕತ್ತನ್ನು ಬಿಗಿಯಾಗಿ ಹಿಡಿದುಕೊಂಡು ಧರಧರನೆ ಎಳೆದುಕೊಂಡು ಮನೆಯ ಆಚೆಗೆ ಬೀಸಾಡಿ ಹೊಡೆದು ಹಲ್ಲೆ ಮಾಡಿರುತ್ತೀರಿ. ಇದು ಭಾರತೀಯ ದಂಡ ಸಂಹಿತೆ ಕಲಂ 341, 354(ಬಿ) ಸಹಕಲಂ 34 ರಡಿ ದಂಡನೀಯ ಅಪರಾಧವಾಗಿದ್ದು, ಈ ನ್ಯಾಯಾಲಯದ ಸಂಜ್ಞೆಯೊಳಗೆ ಎಸಗಿರುತ್ತೀರಿ.

ಮೇಲ್ಕಂಡ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ, 2ನೇ ಆರೋಪಿಯಾದ ನೀವು ಸಾಕ್ಷಿ 1 ರವರ ಎರಡು ಕೈಗಳನ್ನು ಹಿಡಿದುಕೊಂಡು ನಿನ್ನ ಸಾಯಿಸದೆ ಬಿಡಲ್ಲ ಎಂದು ಕೊಲೆ ಬೆದರಿಕೆ ಹಾಕಿರುತ್ತೀರಿ. ಇದು ಭಾರತೀಯ ದಂಡ ಸಂಹಿತೆ ಕಲಂ 506 ಸಹಕಲಂ 34ರಡಿ ದಂಡನೀಯ ಅಪರಾಧವಾಗಿದ್ದು, ಈ ನ್ಯಾಯಾಲಯದ ಸಂಜ್ಞೆಯೊಳಗೆ ಎಸಗಿರುತ್ತೀರಿ.

ಮೇಲ್ಕಂಡ ದೋಷಾರೋಪಣೆಯನ್ನು ತೆರೆದ ನ್ಯಾಯಾಲಯದಲ್ಲಿ ಓದಿ ಹೇಳಿದ್ದು, ಆರೋಪಿಗಳು ನೀಡಿದ ಉತ್ತರವನ್ನು ಹಾಗೆಯೇ ದಾಖಲಿಸಿಕೊಂಡಿದೆಯೆಂದು ಈ ಮೂಲಕ ದೃಢೀಕರಿಸುತ್ತೇನೆ.

**(ಜೈಬುನ್ನಿಸಾ)**
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು
ಹಾಗೂ ಪ್ರ.ದ.ನ್ಯಾ.ದಂಡಾಧಿಕಾರಿಗಳು, ಹುಣಸೂರು.